ಶ್ರೀ ಬಿ. ಚಿಕ್ಕಣ್ಣ.—ಈಗ ನೀವು ಪಡೆದಿರುವ ಟ್ರಾಕ್ಟರುಗಳಿಂದ ಒಂದು ತಾಲ್ಲೂಕಿಗೆ ಒಂದರಂತಾದರೂ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ತಾಲ್ಲೂಕಿಗೊಂದರಂತೆ ಆಗುವುದಿಲ್ಲ, ಡಿಸ್ಟ್ರಿಕ್ಟ್‌ಗೊಂದರಂತೆ ಕೊಡಬಹುದು.

ಶ್ರೀ ಜಿ. ಬನಪ್ಪ.—ಈಗ 2½ ಲಕ್ಷ ರೂಪಾಯಿಗಳಿಗೂ ಪೂರ್ತಿಯಾಗಿ ಟ್ರಾಕ್ಟರುಗಳನ್ನು ತೆಗೆದುಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ತೆಗೆದುಕೊಂಡಿದ್ದೇವೆ.

ಶ್ರೀ ಜಿ. ಬನಪ್ಪ.—ಅವುಗಳನ್ನು ಮಾರ್ಚಿಯ ಅಖ್ಯೆರೊಳಗೆ ರೈತರಿಗೆ ದೊರೆಯುವಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಮಾರ್ಚಿ ಅಖ್ಯೆರೊಳಗೆ ಕೊಡುವುದಕ್ಕೆ ಸಾಧ್ಯವಾಗಬಹುದು.

ಶ್ರೀ ಜಿ. ಬನಪ್ಪ.—ಇದುವರೆಗೂ ಯಾವುದಾದರೂ ಟ್ರಾಕ್ಟರುಗಳನ್ನು ಸರಬರಾಯಿ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಅರ್ಜಿಗಳು ಬಂದಿವೆ. ಟ್ರಾಕ್ಟರುಗಳನ್ನು ಕೇಳಿರುವವರು ಇಂತಿಂಥ ಟ್ರಾಕ್ಟರುಗಳು ಬೇಕೆಂದು ಹೇಳಿದ್ದಾರೆ. ಮಾರ್ಚಿ 31ನೆಯ ತಾರೀಖಿನ ಹೊತ್ತಿಗೆ ಒದಗಿಸುತ್ತೇವೆ.

ಶ್ರೀ ಜಿ ಬನಪ್ಪ.—ಕೇಂದ್ರ ಸರ್ಕಾರದವರು ಈ ಬಗ್ಗೆ 2½ ಲಕ್ಷ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಆರು ತಿಂಗಳ ಮೇಲೆ ಆಯಿತಲ್ಲವೇ ?

ಡಾ॥ ಆರ್. ನಾಗನಗೌಡ.—ಅವರು ಹಣ ಕೊಟ್ಟ ಮೇಲೆ ನಾವು ಯಾವ ರೀತಿ ಕಾರ್ಯಕ್ರಮ ಕೈಕೊಳ್ಳಬೇಕು ಎಂಬುದನ್ನೆಲ್ಲಾ ಆಲೋಚನೆಮಾಡಿ ಅರ್ಜಿಗಳನ್ನು ಕರೆಯಬೇಕಾಗಿತ್ತು. ಮಳೆ ಬಂದು ಉಳುಮೆ ಮಾಡುವ ವೇಳೆಗೆ ಕೊಡುತ್ತೇವೆ.

ಶ್ರೀ ಜಿ. ಬನಪ್ಪ.—ಮಾರ್ಚಿ 15 ರೊಳಗೆ ಹಣ ಪಾವತಿ ಆಗದೆ ಇದ್ದರೆ ಅಕೌಂಟೆಂಟ್ ಜನರಲ್‌ರವರು ಅದರ ಬಗ್ಗೆ ಒದಗಿಸಿರುವ ಹಣ ಲ್ಯಾಪ್ಸ್ ಆಯಿತೆಂದು ಹೇಳುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಇಲ್ಲ ; ಮಾರ್ಚಿ 31ರ ವರೆಗೆ ಅವಕಾಶವಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳು ಕೆಲಸಮಾಡಿ ಎಷ್ಟು ದಿವಸಗಳಾಯಿತು ? ಎಷ್ಟು ದಿವಸಗಳಿಂದ ಕೆಟ್ಟುಹೋಗಿ ನಿಂತಿವೆ ?

ಡಾ॥ಆರ್. ನಾಗನಗೌಡ.—ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೂರು ತಿಂಗಳಿನಿಂದ ಕೆಲಸ ಮಾಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಕೆಲವು ಟ್ರಾಕ್ಟರುಗಳು ಹಾಗಾಗಿಗುವುದು ನಮ್ಮ ಗಮನಕ್ಕೆ ಬಂದಿದೆ. ಮರು ಟಪಾಲಿಗೇ ನಮಗೆ ಆ ಸಮಾಚಾರ ತಿಳಿಯುವ ಏರ್ಪಾಡು ಮಾಡಿದೆ. ಆ ಸಮಾಚಾರ ತಿಳಿದ ಕೂಡಲೇ ರಿಪೇರಿಮಾಡಿಸುತ್ತೇವೆ. ಇನ್ನು ಮೇಲೆ ಅರೀತಿ ತೊಂದರೆಯಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ. ಈಗ ಮೂರು ತಿಂಗಳಿನಿಂದ ಚಿಕ್ಕಮಗಳೂರಿನಲ್ಲಿರುವುದು ರಿಪೇರಿ ಆಗದೆ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ಬಂದಿದೆ. ಆದರೆ ನಮ್ಮಲ್ಲಿ ಬಹಳ ಟ್ರಾಕ್ಟರುಗಳಿವೆ. ಸಮಾಚಾರ ಬಂದ ಮೇಲೆ ಆದಷ್ಟು ಬೇಗ ಸರಿಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

Mr. SPEAKER.—Questions Nos. 300 and 602 are of similar nature. They may be taken up together.

National Extension Service Scheme in the State : Progress.

Q.—300. Sri M. RAJASEKHARA MURTHY (Yelandur).—

Will the Government be pleased to state :—

(*a*) the total number of villages selected by the Government for the execution of National Extension Service Scheme in the State ;

(*b*) the names of the taluks or centres wherein these villages are situated ;

(*c*) the amount spent so far, in each centre ?

A.—Dr. R. NAGAN GOWDA (Minister for Agriculture).—

(*a*) About 700 villages at the rate of about 100 villages in each block.

(*b*) 1. Gundlupet Taluk.
2. Ramanagaram *cum* Kanakapura Taluks.
3. Holenarsipur *cum* Arkalgud Taluks.
4. Harihar--Davangere Taluks.
5. Koppa–Narasimharajapura Taluks.
6. Sidlaghatta Taluk.
7. Turuvekere Taluk.

(*c*) The staff are being recruited and actual work programme has just commenced. The preliminaries such as, survey, collection of statistics are going on with the help of the existing Revenue Department staff. Developmental plans are being worked out by several Departments.

Q.—602. Sri SIDDIAH *alias* KUNNIAH (Gundlupet-Heggaddevanakote—Scheduled Castes).—

Will the Government be pleased to state :—

(*a*) when the community project extension scheme was introduced throughout the State ;